ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಶ್ರೀ ಗುಂಡಪ್ಪ ವಕೀಲರು ಕಂಪ್ಲೇಂಟ್ ಮಾಡಿದ ಮೇಲೆ ನಾವು ತನಿಖೆಯನ್ನು ಮಾಡಿ ಈ ದಾಖಲೆಯನ್ನು ಇಟ್ಟಿರುತ್ತೇವೆ. 30 ಲಕ್ಷ ರೂಪಾಯಿಗಳ ಅವ್ಯವಹಾರದ ಬಗ್ಗೆ ಗಣೇಶಪುರ ಸಣ್ಣ ನೀರಾವರಿ ಯೋಜನೆ ಬಗ್ಗೆ ಹೇಳುತ್ತಿದ್ದಾರೆ, ಅದಕ್ಕೆ ಖರ್ಚಾಗಿರತಕ್ಕಂಥದ್ದು 27 ಲಕ್ಷ 40 ಸಾವಿರ ರೂಪಾಯಿಗಳು, ಅದಕ್ಕೆ ಗೇಟುಗಳನ್ನು ಪರ್ಚೇಸ್ ಮಾಡಿದ್ದಾರೆ. ಇದರ ನಂತರ ತಮ್ಮ ಹತ್ತಿರ ಏನಾದರೂ ಮಾಹಿತಿ ಇದ್ದರೆ ಕೊಡಿ. 30 ಲಕ್ಷ ರೂಪಾಯಿಗಳ ಬಗ್ಗೆ ನೀವು ಏನು ಅವ್ಯವಹಾರವೆಂದು ಹೇಳುತ್ತಿದ್ದೀರಿ, ಅದಕ್ಕೆ ಪರ್ಚೇಸ್ ಮಾಡಿರತಕ್ಕಂಥದ್ದು ನಿಜ ಇದೆ ಎನ್ನುವ ವಾದವನ್ನು ನಾನು ಇಟ್ಟಿದ್ದೇನೆ. ಅದಕ್ಕಾಗಿ ಅವ್ಯವಹಾರ ಗಮನಕ್ಕೆ ಬಂದಿಲ್ಲವೆನ್ನುವ ವಾದವನ್ನು ಇಟ್ಟಿದ್ದೇವೆ. ಅವ್ಯವಹಾರವಾಗಿದೆ ಎಂದು ನೀವು ಡಿಸೆಂಬರ್ ತಿಂಗಳಲ್ಲಿ ಪತ್ರವನ್ನು ಬರೆದಿದ್ದೀರಿ ತದನಂತರ ನಾನು ಜನವರಿಯಲ್ಲಿ ರಿಪ್ಲೈ ಮಾಡಿದ್ದೇನೆ, ಆಮೇಲೆ ನಾನು ದಾಖಲೆಗಳನ್ನು ತರಿಸಿಕೊಂಡಿದ್ದು, ಅದಕ್ಕಾಗಿ ನಾನು ಈ ಮಾತನ್ನು ಆಡುತ್ತಿರುವುದು. ಇಲ್ಲದಿದ್ದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ತನಿಖೆಯಾದ ನಂತರ ಡೀಟೈಲ್ಸ್ ತರಿಸಿಕೊಂಡ ನಂತರವೇ ನಾವು ಈ ಮಾತನ್ನು ಆಡುತ್ತಿರುವುದು. ಏಕೆಂದರೆ, ಬಂದಿದೆ ಎನ್ನತಕ್ಕಂಥ ಮಾತನ್ನು ಆಡಿದ್ದರೆ, ನಾನು ಪರಿಶೀಲಿಸುತ್ತೇನೆ ಎನ್ನುವ ಮಾತನ್ನು ಆಡಬಹುದಾಗಿತ್ತು, ಅದಕ್ಕಾಗಿ ನಾನು ಆಡುತ್ತಿಲ್ಲ. 27 ಲಕ್ಷ 40 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಪರ್ಚೇಸ್ ಮಾಡಿದ್ದಾರೆ, ಆ ದಾಖಲಾತಿ ಇದೆ. ನೀವು ಕೊಟ್ಟಿರುವ ರೆಫರೆನ್ಸ್ ಮೇಲೆ ಪರ್ಚೇಸ್ ಆಗಿದೆ ಎನ್ನತಕ್ಕಂಥ ಮಾತನ್ನು ಆಡುತ್ತಿದ್ದೇನೆ.

ಶ್ರೀ **ಗುಂಡಪ್ಪ ವಕೀಲ** : ಅದನ್ನು ವೆರಿಫೈ ಮಾಡಿದಿರಾ? ಎಂಬ ಬುಕ್‌ಗಳಿಗೆ, ಬಿಲ್‌ಗಳಿಗೆ, ಯಾರು ಸಪ್ಲೈ ಮಾಡಿದ್ದಾರೆ, ಎಂಟರ್ ಪ್ರೈಸೆಸ್‌ಗಳು ಬೋಗಸ್ ಇವೆ ಎನ್ನುವ ಬಗ್ಗೆ ನಾನು ಹೇಳಿದ್ದೇನೆ;

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಇದನ್ನು ವೆರಿಫೈ ಮಾಡಿಸಿರುವುದರಿಂದ, ಇದಕ್ಕೆ ಕಾರ್ಯಪಾಲಕ ಅಭಿಯಂತರರು ಜವಾಬ್ದಾರಿ ಇರುವುದರಿಂದ ಇವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆ. ತಾವು ಕೊಟ್ಟಿರುವ ದಾಖಲೆಗಳು ಗಣೇಶಪುರ ಕೆರೆಗೆ ಸೀಮಿತ ಇರಬಹುದು. ನಾವು ಇಡೀ ಬೀದರ್ ಜಿಲ್ಲೆ ವ್ಯಾಪ್ತಿಗೆ ತನಿಖೆ ಮಾಡಿಸಿ, ಇದರಲ್ಲಿ ಗಣೇಶಪುರದ ಬಗ್ಗೆ ಅವ್ಯವಹಾರ ಇದೆಯೋ ಎನ್ನುವ ಬಗ್ಗೆ ನೋಡಿ ಮಾನ್ಯ ಶಾಸಕರಿಗೆ ಮಾಹಿತಿಯನ್ನು ಕೊಡುತ್ತೇನೆ.

ಆ) **ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:**

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ 16ನೇ ಪಟ್ಟಿಯಲ್ಲಿರುವ ಒಟ್ಟು 130 ಪ್ರಶ್ನೆಗಳ ಪೈಕಿ, 100 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.